ದಾಖಲೆಗಳಿವೆಯಲ್ಲ. ಅವನ್ನು ಜೋಪಾನವಾಗಿ ಇಟ್ಟುಕೊ' ಅಂತ ಹೇಳಿ ಕಳಿಸಿದರು.

ಊರ ಜನರ ಎದುರಲ್ಲಿ ಮೊದೀನ್‌ನ ವಿಚಾರಣೆ ಮಾಡಬೇಕು. ಅವರ ಹತ್ರ ಇರೋ ಕಾಗದ ಪತ್ರಗಳನ್ನಾದರೂ ನಾವು ನೋಡಬೇಕು. ಅದಕ್ಕಿಂತ ಮುಖ್ಯ ಅಂದರೆ ಇಮಾಂ ಸಾಬರ ಊರು ಯಾವುದು. ಅವರು ಇಲ್ಲಿಗೇಕೆ ಬಂದರು ಅನ್ನೋದು ಇತ್ಯರ್ಥ ಆಗಬೇಕು ಅಂತ ಕೆಲವರು ಪ್ರೆಸಿಡೆಂಟರ ಎದುರು ವಾದಿಸಿ ಅವರಿಗೆ ಸಿಟ್ಟು ತರಿಸಿದರು.

'ಊರ ಜನರ ಎದುರು ಮೊದೀನ್‌ನ ವಿಚಾರಿಸುವುದರಲ್ಲಿ ತಪ್ಪಿಲ್ಲ. ಆದರೆ, ಅದು ಪಂಚಾಯ್ತಿ ಥರ ಆಗಬಾರದು. ಮೊದೀನ್‌ಗೆ ಏನೇನೊ ಪ್ರಶ್ನೆಗಳನ್ನು ಕೇಳಿ ಅವಮಾನ ಮಾಡಿದರೆ ನಾನು ಸುಮ್ಮನಿರಲ್ಲ' ಅಂತ ಪ್ರೆಸಿಡೆಂಟರು ಷರತ್ತು ಹಾಕಿದರು. 'ಹಂಗೇನಾದರೂ ಆದರೆ ನಾನು ಅಲ್ಲಿ ಒಂದು ನಿಮಿಷವೂ ಇರಲ್ಲ' ಅಂತ ರಾಮಣ್ಣ ಸ್ಪಷ್ಟವಾಗಿ ಹೇಳಿದರು. ಈ ಷರತ್ತುಗಳಿಗೆ ಒಪ್ಪಿದ ಮೇಲೆ ಮೊದೀನ್‌ನ ಕರೆಸಿ ವಿಚಾರಿಸಲು ಪ್ರೆಸಿಡೆಂಟರು ಒಪ್ಪಿದರು.

ಮರುದಿನ ಸಂಜೆ ನಾಲ್ಕು ಗಂಟೆ ಹೊತ್ತಿಗೆ ಹನುಮಂತರಾಯನ ಗುಡಿ ಮುಂದೆ ಮನೆಗೊಬ್ಬರಂತೆ ಬಂದು ಸೇರಿದರು. ಸಭೆ ಶುರುವಾಗೋ ಹೊತ್ತಿಗೆ ಹೇಳಿ ಕಳಿಸಿದಂತೆ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರು ಬಂದರು. ಅವರು ಬಂದದ್ದು ಊರ ಹಿರಿಯರಿಗೆ ಇಷ್ಟವಾಗಲಿಲ್ಲ. 'ಇದು ನಮ್ಮೂರಿನ ವಿಷಯ. ನೀವು ಇಲ್ಲಿ ಇರುವುದು ಬೇಡ' ಅಂತ ಪ್ರೆಸಿಡೆಂಟರೂ ಸೇರಿದಂತೆ ಅನೇಕರು ಅವರಿಗೆ ನೇರವಾಗಿ ಹೇಳಿದರು.

'ಹೊಸಳ್ಳಮ್ಮನ ಗುಡಿಗೆ ಹತ್ತು ಲಕ್ಷ ರೂಪಾಯಿ ಕೊಡೋರನ್ನ ಬರಬೇಡಿ ಅಂದ್ರೆ ಹೆಂಗೆ?' ಅಂತ ಕೆಲವರು ವಾದಿಸಿದರು. ಅವರು ಇರಬೇಕೇ ಬೇಡವೇ ಅನ್ನೋ ಬಗ್ಗೆಯೇ ಸುಮಾರು ಹೊತ್ತು ಮಾತುಕತೆ ಆಯಿತು. ಕೆಲವರು ಧ್ವನಿ ಎತ್ತರಿಸಿ ಮಾತಾಡಿದರು. ಕೊನೆಗೆ ಅವರು ಏನೂ ಮಾತಾಡದೆ ಸುಮ್ಮನೆ ಕೂತಿರಬೇಕು ಅನ್ನೋ ಷರತ್ತಿನ ಮೇಲೆ ಸಭೆಯಲ್ಲಿ ಇರಲು ಹಿರಿಯರು ಒಪ್ಪಿದರು. ಇಷ್ಟೆಲ್ಲಾ ಆಗಿ ಸಭೆ ಶುರುವಾಗೊ ಹೊತ್ತಿಗೆ ಮುಸ್ಸಂಜೆಯಾಗಿತ್ತು.

'ನೀವು ಏನು ಕೇಳ್ತೀರೊ ಕೇಳಬಹುದು...' ಅನ್ನುತ್ತ ಮೊದೀನ್ ಎದ್ದು ಕೈಕಟ್ಟಿ ನಿಂತುಕೊಂಡ. ಅದು ಊರ ಹಿರಿಯರಿಗೆ ಇಷ್ಟವಾಗಲಿಲ್ಲ. 'ಅಣ್ಣಾ, ನೀವು ಕೂತುಕೊಂಡೇ ಮಾತಾಡಿ...' ಅಂತ ರಾಮಣ್ಣ ವಿನಂತಿ ಮಾಡಿಕೊಂಡರು. ಅದಕ್ಕೆ ಯಾರೂ ಬೇಡ ಅನ್ನಲಿಲ್ಲ.

'1949ರಲ್ಲಿ, ಅಂದರೆ ನಾನು ಹುಟ್ಟೋಕೆ ಮೊದಲು, ಆವತ್ತಿನ ಸರ್ಕಾರ ಅಪ್ಪನಿಗೆ ಎರಡೆಕರೆ ಭೂಮಿ ಮಂಜೂರು ಮಾಡಿತ್ತು. ಇದು ಮಂಜೂರಾತಿ ಪತ್ರ. ಇದು ರಿಜಿಸ್ಟರು ಮಾಡಿಕೊಟ್ಟ ಪತ್ರ. ಇದು ಅಪ್ಪ ಮತ್ತು ಚಿಕ್ಕಪ್ಪ ಭೂಮಿ ಹಂಚಿಕೊಂಡ ಪಾಲೀಖತ್ತು. ಅಪ್ಪ ಸತ್ತ ಮೇಲೆ 37 ಗುಂಟೆ ನನ್ನ ಹೆಸರಿಗೆ ಫೌತಿ ಖಾತೆ ಆಗಿರೊ ದಾಖಲೆ ಪತ್ರ. ಉಳಿದದ್ದು ನಮ್ಮ ಶೌಕತ್ ಹೆಸರಿಗೆ ಖಾತೆ ಆಗಿದೆ. ಇವು ಕಂದಾಯ ಕಟ್ಟಿದ ರಸೀದಿಗಳು' ಅಂತ ಎಲ್ಲವನ್ನೂ ತೋರಿಸಿದ. 'ಇವೆಲ್ಲ ಜೆರಾಕ್ಸ್ ಕಾಪಿಗಳು ಅಂತ ಹೇಳಿ ಅವನ್ನೆಲ್ಲ ಪ್ರೆಸಿಡೆಂಟರಿಗೆ ಕೊಟ್ಟ. ಒರಿಜನಲ್ಲುಗಳು ಇಲ್ಲಿವೆ...' ಅಂತ ಹೇಳಿ ತನ್ನೆದುರು ಇಟ್ಟುಕೊಂಡಿದ್ದ ಕಾಗದಗಳನ್ನು ತೋರಿಸಿದ.

'ನಮ್ಮ ಊರು ಯಾವುದು ಅನ್ನೋದು ನಿಜವಾಗಿಯೂ ನಂಗೊತ್ತಿಲ್ಲ. ಅಪ್ಪ, ಚಿಕ್ಕಪ್ಪ ಈ ಹೊಸಳ್ಳಿಗೆ ಯಾಕೆ ಬಂದರು ಅನ್ನೋದೂ ಗೊತ್ತಿಲ್ಲ. ಇಲ್ಲಿಗೆ ಬರೋ ಮೊದಲು ಅಪ್ಪ ದೊಡ್ಡ ಸಿದ್ದವನಹಳ್ಳಿಯಲ್ಲಿ ಇದ್ದರಂತೆ. ನಮ್ಮೂರು ಯಾವುದು ಅಂತ ಒಂದು ಸಲ ಅಪ್ಪನನ್ನು ಕೇಳಿದ್ದೆ. ಅದಕ್ಕೆ ಅವರು ಉತ್ತರ ಹೇಳದೆ ಕಣ್ಣಲ್ಲಿ ನೀರು ತಂದುಕೊಂಡಿದ್ದರು. ಚಿಕ್ಕಪ್ಪನನ್ನು ಒಂದು ಸಲ ಕೇಳಿದ್ದೆ. ಅವರು ಇಲ್ಲಿಗೆ ಬಂದಾಗ ಸಣ್ಣ ಹುಡುಗರಂತೆ. ನಂಗೇನೂ ನೆನಪಿಲ್ಲ ಅಂತ ಹೇಳಿದ್ದರು.

ಅಪ್ಪ ಎಲ್ಲಿಂದಲೊ ಇಲ್ಲಿಗೆ ಬಂದರು. ಅವರು ಈ ದೇಶದವರೇ ಅಲ್ಲ ಅಂತ ಕೆಲವರು